ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ, ಕುಂದಾಪುರ

ಸಿ.ಸಿ. ನಂಬ್ರಃ1924/2019

ಚಾಸಾಃ2 ಪ್ರಾಸಾಃ2

ದಿನಾಂಕಃ 19.12.2024

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ಸ್ಟೇಲ್ಲಾ |
| ಗಂಡನ ಹೆಸರು | : | ಸೇವೆರೆ ಡಿ ಕೋಸ್ತಾ |
| ವಯಸ್ಸು | : | 69 ವರ್ಷ |
| ಉದ್ಯೋಗ | : | ಗೃಹಿಣಿ |
| ವಾಸ ಸ್ಥಳ | : | ಕೋಣಿ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**<u>ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ.ರವರಿಂದಃ</u>**

ದಿಃ 03-04-2019 ರಂದು ಆರೋಪಿ ಮತ್ತು ಆಕೆಯ ಗಂಡನ ನಡುವೆ ಅವರು ವಾಸವಿದ್ದ ನಮ್ಮ ಪಕ್ಕದ ಮನೆಯಲ್ಲಿ ಗಲಾಟೆ ನಡೆಯುತ್ತಿದ್ದು ನಾವು ನಮ್ಮ ಮನೆಯಲ್ಲಿಇದ್ದು ನಾವು ಅದನ್ನು ವಿಚಾರಿಸಲು ಅವರ ಮನೆ ಬಳಿ ನಾನು ಮತ್ತು ಚಾಸಾ-3ರವರು ಹೋಗಿರುತ್ತೇವೆ. ಆಗ ಸಮಯ 5-30 ಆಗಿರುತ್ತದೆ. ಆರೋಪಿ ಮತ್ತು ಚಾಸಾ-1ರವರು ಒಂದೇ ಮನೆಯಲ್ಲಿ ಬೇರೆ ಬೇರೆ ವಾಸವಾಗಿದ್ದು ಚಾಸಾ-1ರವರ ಜಾಗದಲ್ಲಿ ಇದ್ದ ತೆಂಗಿನ ಕಾಯಿಯನ್ನು ತೆಗೆಯಲು ಆರೋಪಿ ಮುಂದಾದಾಗ ಪಾಗಾರಕ್ಕೆ ಕಟ್ಟಿದ್ದ ಕಲ್ಲನ್ನು ಕಿತ್ತು ಹಾಕಿರುತ್ತಾರೆ. ಆಗ ಚಾಸಾ-1ರವರು ಪ್ರಶ್ನಿಸಿದ್ದು, ಆರೋಪಿ ಆತನನ್ನು ಅವಾಚ್ಯವಾಗಿ ನಿಂಧಿಸಿ ನನ್ನ ಜಾಗವೆಂದು ಹೇಳಿ ಪ್ರಾಸಾ-1ರವರಿಗೆ ದೊಣ್ಣೆಯಿಂದ ಹೊಡೆದಿರುತ್ತಾರೆ. ಅದನ್ನು ಪ್ರಶ್ನಿಸಲು ಚಾಸಾ-3ರವರು ಮುಂದಾದಾಗ 2ನೇ ಆರೋಪಿ ಮುಂದಕ್ಕೆ ಓಡಿ ಬಂದು ಚಾಸಾ-1 ಮತ್ತು 3 ರವರಿಗೆ ಕಾಲಿನಿಂದ ತುಳಿದಾಗ ಇಬ್ಬರೂ ಬಿದ್ದಿರುತ್ತಾರೆ. ಅನಂತರ ಮರುದಿನ ಚಾಸಾ-1 ಮತ್ತು 3ರವರು ಆಸ್ಪತ್ರೆಗೆ ದಾಖಲಾಗಿರುತ್ತಾರೆ. ಅನಂತರ ನಾನು ಮನೆಗೆ ಹೋಗಿರುತ್ತೇನೆ. ಈ ವಿಚಾರವಾಗಿ ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ. ಸಾಕ್ಷಿ ಮುಮಾ1 ನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಬಿ. ಆರ್.ಎನ್ ರವರಿಂದಃ**

ನಾವು ಬಸ್ರೂರಿನ ಬೇರೆ ಮನೆಯಲ್ಲಿ ವಾಸವಾಗಿದ್ದೇವೆ ಎಂದರೆ ಸರಿ. ಚಾಸಾ-1, 3 ಮತ್ತು ನಾನು ಮತ್ತು ನನ್ನ ಮಗನ ವಿರುದ್ದ ಆರೋಪಿತರು 1 ಪ್ರಕರಣವನ್ನು ದಾಖಲಿಸಿದ್ದಾರೆ ಎಂದರೆ ಸರಿ. ಅದೇ ರೀತಿ ಹಲ್ಲೆಯ ಹಿನ್ನೆಲೆ ಪ್ರಾಸಾ-1ರವರ ವಿರುದ್ದ ಇನ್ನೂ 2 ಪ್ರಕರಣಗಳು ದಾಖಲಾಗಿದೆ ಎಂದರೆ ಸರಿ. ಪ್ರಾಸಾ-1ರವರು 1ನೇ ಆರೋಪಿಗೆ ಕತ್ತಿಯಿಂದ ಕಡಿಯಲು ಮುಂದಾಗಿದ್ದರು ಎಂಬ ಹಿನ್ನೆಲೆಯಲ್ಲಿ ಒಂದು ದೊಡ್ಡ ಪ್ರಕರಣ ದಾಖಲಾಗಿದೆ ಎಂಬ ವಿಚಾರ ನನಗೆ ತಿಳಿದಿದೆ.

ಪ್ರಾಸಾ-1ರವರ ಮನೆಯ ಒಂದು ಕೋಣೆಯಲ್ಲಿ ಆರೋಪಿತರು ಮತ್ತು 1ನೇ ಆರೋಪಿಯ ಇನ್ನೊಬ್ಬ ಮಗ ಹಾಗೂ ಪ್ರಾಸಾ-1ರವರ ತಾಯಿ ಒಟ್ಟಾಗಿ ವಾಸವಿದ್ದಾರೆ ಎಂದರೆ ಸರಿ. 1ನೇ ಆರೋಪಿಗೆ ಕೆಲಸ ಇರುವ ಬಗ್ಗೆ ನನಗೆ ತಿಳಿದಿಲ್ಲ. ಯಾವ ವಿಚಾರಕ್ಕಾಗಿ ಆಕೆ ಮತ್ತು ಪ್ರಾಸಾ-1ರವರ ನಡುಗೆ ಗಲಾಟೆಯಾಗುತ್ತಿತ್ತು ಎಂದು ನನಗೆ ತಿಳಿದಿಲ್ಲ. ಪಾಗಾರವನ್ನು ಹಿಂದೆಯೇ ಕಟ್ಟಿರುತ್ತಾರೆ. ಅದನ್ನು ಕಿತ್ತು ಹಾಕಿದ್ದನ್ನು ನಾನು ನೋಡಿರುತ್ತೇನೆ. ಪಾಗಾರ ಕೀಳುತ್ತಿರುವಾಗ ಗಲಾಟೆಯಾಗಿರುತ್ತದೆ. ಅಂದರೆ ಪ್ರಾಸಾ-1ರವರ ಎದುರೇ ಪಾಗಾರವನ್ನು ಕಿತ್ತಿರುತ್ತಾರೆ.

ಪೊಲೀಸರು ನನ್ನನ್ನು 6ನೇ ತಾರೀಕು ವಿಚಾರಣೆ ಮಾಡಿರುತ್ತಾರೆ. ನಾನು ಪೊಲೀಸರಿಗೆ ಪ್ರಾಸಾ-1ರವರ ಎದುರೇ 1ನೇ ಆರೋಪಿ ಸಂಜೆ 5-30 ವೇಳೆಗೆ ಪಾಗಾರದ ಕಲ್ಲನ್ನು ಕಿತ್ತರು ಎಂದು ತಿಳಿಸಿರುತ್ತೇನೆ. ಪೊಲೀಸರು ಮಾಡಿದ ಒಂದು ಬರವಣಿಗೆಗೆ ನಾನು ಸಹಿ ಮಾಡಿರುತ್ತೇನೆ. ಅದರಲ್ಲಿ ಏನು ಬರೆದಿದೆ ಎಂದು ನಾನು ಓದಿ ನೋಡಿಲ್ಲ. ಪ್ರಾಸಾ-1ರವರು ಮನೆಯಲ್ಲಿ ಇಲ್ಲ ಎಂದು ಗಮನಿಸಿ ನಂತರ 1ನೇ ಆರೋಪಿ ದಾರಿಯಲ್ಲಿ ಇದ್ದ ಕಲ್ಲನ್ನು ಕಿತ್ತಿರುವುದಾಗಿ ನಾನು ಹೇಳಿರುವುದಿಲ್ಲ. ಆರೋಪಿತರು ನನ್ನ ಮೇಲೆ ಯಾವುದೇ ಹಲ್ಲೆ ಮಾಡಿಲ್ಲ. ಸಣ್ಣ ಕೋಲಿನಿಂದ ಕಲ್ಲನ್ನು ಕಿತ್ತು ಕೈಯಿಂದ ಎಸೆದಿರುತ್ತಾರೆ. ಸಣ್ಣ ಕೋಲನ್ನು ನಾನು ನೋಡಿರುತ್ತೇನೆ.

ಪೊಲೀಸರು ಸ್ಥಳಕ್ಕೆ ಬಂದಾಗ ಒಂದು ಕೋಲನ್ನು ಮಾತ್ರ ತೆಗೆದುಕೊಂಡು ಹೋಗಿರುತ್ತಾರೆ. ಅದು ಕಿತ್ತ ಕೋಲು ಆಗಿರುವುದಿಲ್ಲ. 1ನೇ ಆರೋಪಿ ಪ್ರಾಸಾ-1ರವರಿಗೆ ಹೊಡೆದಿರುತ್ತಾರೆ ಯಾವುದೇ ಗಾಯವಾಗಿರುವುದನ್ನು ನಾನು ನೋಡಿರುವುದಿಲ್ಲ. ಪ್ರಾಸಾ-3ರವರಿಗೆ ಗಾಯವಾಗಿದ್ದು ನಾನು ನೋಡಿಲ್ಲ.

ನಾನು, ಚಾಸಾ-1 ಮತ್ತು 3 ರವರು ಆರೋಪಿತರನ್ನು ಮನೆಯಿಂದ ಹೊರಗೆ ಹಾಕಬೇಕೆಂಬ ದುರದ್ದೇಶದಿಂದ ಈ ರೀತಿ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಪ್ರಾಸಾ-1ರವರು 1ನೇ ಆರೋಪಿಗೆ ಯಾವಾಗಲೂ ಹಲ್ಲೆ ನಡೆಸುತ್ತಿದ್ದು ಅದಕ್ಕಾಗಿ ನಾವು ಪ್ರೇರಣೆ ನೀಡುತ್ತಿದ್ದೇವು ಎಂದರೆ ಸರಿಯಲ್ಲ. ಉದ್ದೇಶಪೂರ್ವಕವಾಗಿ ಪ್ರಾಸಾ-1ರವರು ಹೆಂಡತಿ ಮಕ್ಕಳನ್ನು ಹೊರಗೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಅದೇ ದ್ವೇಷದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆದರೆ ಸರಿಯಲ್ಲ. ಆರೋಪಿತರು ಅಸಹಾಯಕರು ಆದ ಕಾರಣ ಪ್ರಾಸಾ-1ರವರು ಅವರ ವಿರುದ್ದ ಅನವಶ್ಯಕವಾಗಿ ಪ್ರಕರಣಗಳನ್ನು ದಾಖಲಿಸುತ್ತಿದ್ದು ನಾವು ಅದನ್ನು ಪುಷ್ಟಿ ಗೊಳಿಸುತ್ತಿದ್ದೇವು ಎಂದರೆ ಸರಿಯಲ್ಲ. 1ನೇ ಆರೋಪಿಯು ಚಾಸಾ-1ರವರಿಗೆ ಹಲ್ಲೆ ಮಾಡಿ ಪಾಗಾರ ದೂಡಿ ಗಾಯಗೊಳಿಸಿದ್ದು, ಅಂತಹ ಯಾವುದೇ ಘಟನೆ ನಡೆದಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**